# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:- 17-09-2022 ರಂದು ಬೆಳಗ್ಗೆ:- 10.00 ಗಂಟೆಗೆ ಶ್ರೀ. ಶ್ರೀ ಶಿವಕುಮಾರ ಸ್ವಾಮೀಜಿ ಸಾರ್ವಜನಿಕ ಸೇವಾ ಸಂಕೀರ್ಣ ವಾರ್ಡ್ ಸಂಖ್ಯೆ 126 ಮಾರುತಿಮಂದಿರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿಗಳು:-

| Sl.No | Name | Ph.No | Present / Absent |
|---|---|---|---|
| 1 | **Nodal Officer:= Prakash K.S EE Govindarajnagara Division** | 9845494728 | Present |
| 2 | Sathish Kumar .B AE 126 (Incharge) BBMP | 9880294721 | Present |
| 3 | Bharath kumar B.N J.E Bescom | - | Present |
| 4 | Mamatha , J.E BESCOM | 9449869245 | Present |
| 5 | Ramesh R Junior Health Inspector | 9206687122 | Present |
| 6 | Babu Tax Inspector ward No 126 | 9945334509 | Present |
| 7 | R Prakash – Horthiculture | 9902087753 | Present |
| 8 | Thimmappa B – Revenue Inspector | 9972809545 | Present |
| 9 | SUdeep .N Marshal SWM | 9535929289 | Present |
| 10 | Rangadamaiah W.I | 9880376090 | Present |
| 11 | Manjunath .K Street Light | 7022988706 | Present |
| 12 | Shankar A.S.I Police | 9035490733 | Present |
| 13 | Kumar J BWSSB | 9901537725 | Present |
| 14 | Suresh Forest Department BBMP | 8073299107 | Present |
| 15 | P Nagashetty Senior Veterinary Inspector | 9080683055 | Present |

ಸಭೆಗೆ ಹಾಜರಿದ್ದ ಸದಸ್ಯರುಗಳು:-

| Sl.No | Name | Ph.No | Present / Absent |
|---|---|---|---|
| 1 | S K Rao -RWA-Canara bank colony | 7975571374 | Present |
| 2 | T L Pai-RWA-Canara bank colony | 9741777170 | Present |
| 3 | A M Shivashankar RWA- Vinayaka layout | 9448055204 | Present |
| 4 | Revathi M | 9632112539 | Present |

ದಿನಾಂಕ. 17-09-2022ರಂದು ಬೆಳಿಗ್ಗೆ 10-00 ಗಂಟೆಗೆ **ಚರ್ಚಿಸಲಾದ ವಿಷಯಗಳ ವಿವರಗಳು:-**

ನೋಡೆಲ್ ಅಧಿಕಾರಿ ಶ್ರೀ ಪ್ರಕಾಶ್ ಕೆ.ಎಸ್ ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ರವರು ಎಲ್ಲರಿಗೂ ವಂದಿಸುತ್ತಾ, ಸಭೆಯನ್ನು ಆರಂಭಿಸಿದರು.

1. ವಾರ್ಡ್‌ನಲ್ಲಿರುವ ಪಾಟ್‌ಹೋಲ್‌ಗಳನ್ನು Fix my Street App ಮೂಲಕ ಫೋಟೋ ಹಿಡಿದು ಅಪ್‌ಲೋಡ್ ಮಾಡಲು ಹಾಜರಿದ್ದ ಎಲ್ಲಾ RWA ಸದಸ್ಯರಿಗೆ ತಿಳಿಸಿದರು.
2. ವಾರ್ಡ್‌ನಲ್ಲಿರುವ ಪಾರ್ಕ್‌ಗಳ Maintenance ಕಾಮಗಾರಿಯನ್ನು ಶೀಘ್ರದಲ್ಲಿಯೇ ಪ್ರಾರಂಭಿಸಿರುವುದಾಗಿ ತಿಳಿಸಿದರು.

3. ಜಿಕೆಡಬ್ಲ್ಯೂ ಬಡಾವಣೆಯಲ್ಲಿರುವ ಸಾರ್ವಜನಿಕ ಶೌಚಾಲಯದ ನಿರ್ವಹಣೆ ಮಾಡಲು ಯಾರೊಂದಿಗೆ ಒಡಂಬಡಿಕೆ ಮಾಡಲಾಗಿದೆ ಎಂದು ಮುಂದಿನ ಸಭೆಯಲ್ಲಿ ತಿಳಿಸಲು ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

4. ಕಸ ವಿಲೇವಾರಿಗೆ ಪೌರಕಾರ್ಮಿಕರ ಹಾಗೂ ಆಟೋಗಳ Micro Planning ವಿವರಗಳನ್ನು ಒದಗಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡೆಲ್ ಅಧಿಕಾರಿಗಳು ಸೂಚಿಸಿರುತ್ತಾರೆ.

5. ಬೀದಿ ದೀಪಗಳ ನಿರ್ವಹಣೆ ಕಾಮಗಾರಿಯ ಟೆಂಡರ್‌ನ್ನು ಅನುಮೋದನೆಗಾಗಿ ಕಳುಹಿಸಲಾಗಿದ್ದು, ಕಾಮಗಾರಿ ಪ್ರಾರಂಭವಾಗುವುದಾಗಿ ತಿಳಿಸಿರುತ್ತಾರೆ.

6. ಜಾಹಿರಾತುಗಳ ಬಗ್ಗೆ FIR ಮಾಡಿಸುವುದು ಸಹ ಕಂದಾಯ ಅಧಿಕಾರಿಗಳ ವ್ಯಾಪ್ತಿಗೆ ಒಳಪಡುತ್ತದೆ ಎಂದು ನೋಡೆಲ್ ಅಧಿಕಾರಿಗಳು ತಿಳಿಸಿರುತ್ತಾರೆ.

7. ಗೋವಿಂದರಾಜನಗರ ಪೊಲೀಸ್ ಸಿಬ್ಬಂದಿ ಹಾಜರಿದ್ದು, ಅವರ ಬೀಟ್ ಹಾಗೂ Route ಗಳ ಮಾಹಿತಿಯನ್ನು RWA ರವರುಗಳಿಗೆ ತಿಳಿಸಲು ನೋಡೆಲ್ ಅಧಿಕಾರಿಗಳು ತಿಳಿಸಿದರು.

8. ವಾರ್ಡ್ ಕಛೇರಿ ರಸ್ತೆಯಲ್ಲಿ ಬೆಸ್ಕಾಂ ಹಾಗೂ ಬಿಡಬ್ಲ್ಯೂಎಸ್‌ಎಸ್‌ಬಿ ಮಾಡಿದ ರಸ್ತೆ ಅಗೆತಗಳು ಇಳಿದಿದ್ದು, ಇದರಿಂದ ತುಂಬಾ ಅಪಘಾತಗಳು ಸಂಭವಿಸುತ್ತದೆ ಎಂದು ದೂರು ಬಂದಿರುತ್ತದೆ. ಇದಕ್ಕೆ ಉತ್ತರವಾಗಿ ರಸ್ತೆ ಮೂಲಭೂತ ಸೌಕರ್ಯ ವಿಭಾಗರವರು ಈ ರಸ್ತೆಯ ಕಾಮಗಾರಿಯನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿಗಳು ತಿಳಿಸಿದರು.

9. ಮರಗಳ ರೆಂಬೆಗಳನ್ನು ಟ್ರಿಮ್ಮಿಂಗ್ ಮಾಡುವುದು ಬಾಕಿ ಇರುವುದಾಗಿ ಕೆನರಾ ಬ್ಯಾಂಕ್ ಕಾಲೋನಿ, ಪಿ.ಎಫ್ ಬಡಾವಣೆ ಹಾಗೂ ವಿನಾಯಕ ಬಡಾವಣೆ ನಿವಾಸಿಗಳು ದೂರಿರುತ್ತಾರೆ. ಇದಕ್ಕೆ ಅರಣ್ಯ ಇಲಾಖೆಯವರು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

10. ಕೆನರಾ ಬ್ಯಾಂಕ್ ಕಾಲೋನಿ 9ನೇ ಮುಖ್ಯರಸ್ತೆ ಹಾಗೂ ವಿನಾಯಕ ಬಡಾವಣೆ 2ನೇ ಮುಖ್ಯರಸ್ತೆಯಲ್ಲಿ ಮರಗಳನ್ನು ಟ್ರಿಮ್ಮಿಂಗ್ ಮಾಡಲು ಸದಸ್ಯರು ದೂರಿರುತ್ತಾರೆ. ಅದಕ್ಕೆ ಉತ್ತರವಾಗಿ ಎಲ್ಲಾ ಬಡಾವಣೆಗಳಲ್ಲಿ ಮರಗಳ ಟ್ರಿಮ್ಮಿಂಗ್ ಅವಶ್ಯಕತೆಯಿರುವ ಎಲ್ಲಾ ಸ್ಥಳಗಳ ಪಟ್ಟಿ ಮಾಡಿ ನೀಡಲು ನೋಡೆಲ್ ಅಧಿಕಾರಿಗಳು ತಿಳಿಸಿದರು.

11. ಕೆನರಾ ಬ್ಯಾಂಕ್ ಕಾಲೋನಿಯ ಚರಂಡಿಗಳಲ್ಲಿ ಹೂಳೆತ್ತುವುದು ಹಾಗೂ ರಸ್ತೆಗಳಿಗೆ ಡಾಂಬರು ಒದಗಿಸಬೇಕಾಗಿರುತ್ತದೆ ಎಂದು ಅಲ್ಲಿನ ನಿವಾಸಿಗಳು ತಿಳಿಸಿರುತ್ತಾರೆ. ಈ ಕಾಮಗಾರಿ ಅನುಮೋದನೆಯಾಗಿದ್ದು, ಅತೀ ಶೀಘ್ರವಾಗಿ ಪ್ರಾರಂಭಿಸಲಾಗುವುದು ಎಂದು ನೋಡೆಲ್ ಅಧಿಕಾರಿಗಳು ತಿಳಿಸಿದರು.

12. ಕೆನರಾ ಬ್ಯಾಂಕ್ ಕಾಲೋನಿಯ ಉದ್ಯಾನವನದಲ್ಲಿ interlocking Pavers ಕಾಮಗಾರಿ ಬಾಕಿಯಿದ್ದು, ಪೂರ್ಣಗೊಳಿಸಲು ಕೋರಿರುತ್ತಾರೆ ಹಾಗೂ ಅನುಭವನಗರದ ರಸ್ತೆಗಳ Dead end ನಲ್ಲಿ ಮನೆಗಳಿಂದ ಹರಿಯುವ ನೀರು ಉದ್ಯಾನವನದಲ್ಲಿ ಹರಿಯುತ್ತಲಿರುತ್ತದೆ. ಎಂದು ದೂರಿರುತ್ತಾರೆ. ಉದ್ಯಾನವನದಲ್ಲಿ ಕಾಮಗಾರಿ ಪ್ರಾರಂಭವಾದ ಕೂಡಲೇ ಮೇಲಿನ ದೂರಿನ ಬಗ್ಗೆ ಕ್ರಮ ವಹಿಸಲಾಗುವುದು.

Mob. : 98

13. ಶಿವಾನಂದನಗರದಲ್ಲಿ ನಾಗಲಕ್ಷ್ಮಿ ದೇವಸ್ಥಾನದ ಕಾಮಗಾರಿ ಸ್ಥಗಿತಗೊಂಡಿದೆ ಎಂದು ದೂರು ಬಂದಿರುತ್ತದೆ. ಮಾರ್ಪಾಡು ಅಂದಾಜು ಪಟ್ಟಿಯನ್ನು ಅನುಮೋದನೆಗಾಗಿ ಕಡತ ಮಂಡಿಸಲಾಗಿರುತ್ತದೆ. ಅನುಮೋದನೆಯ ನಂತರ ಕಾಮಗಾರಿ ಮುಂದುವರೆಸಲಾಗುವುದು.
14. ಟ್ರಾಫಿಕ್ ಪೋಲೀಸ್ ಸಿಬ್ಬಂದಿ ಸಭೆಗಳಿಗೆ ಗೈರು ಹಾಜರಾಗುತ್ತಿರುವ ಬಗ್ಗೆ ಹಾಜರಿದ್ದ ಎಲ್ಲಾ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿರುತ್ತಾರೆ ಹಾಗೂ ಹಲವು ರಸ್ತೆ ಬದಿಗಳಲ್ಲಿ ನಾಲ್ಕು ಚಕ್ರದ ವಾಹನಗಳನ್ನು ನಿಲ್ಲಿಸಿ ಹೋಗುತ್ತಿರುವ ಬಗ್ಗೆ ಹಲವು ದೂರುಗಳು ಬಂದಿರುತ್ತದೆ.
ಟ್ರಾಫಿಕ್ ಸಿಬ್ಬಂದಿಗೆ ಮುಂದಿನ ಸಭೆಗೆ ತಪ್ಪದೇ ಹಾಜರಾಗಲು ನೋಟೀಸ್ ನೀಡಲು ನೋಡೆಲ್ ಅಧಿಕಾರಿಗಳು ಸೂಚಿಸಿದ್ದು, ತಪ್ಪಿದಲ್ಲಿ ಅವರ ಮೇಲಾಧಿಕಾರಿಗಳಿಗೆ ತಿಳಿಸಲು ಸೂಚಿಸಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

13/9/22.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ಸಂಖ್ಯೆ.151

ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ.151

**ಪ್ರತಿಯನ್ನು:-**

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.